**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ,</u>**

**<u>ಅಂಕೋಲಾ.</u>**

**<u>ಸಿಸಿ ನಂಬರ 186/2024</u>**

**ಪಿರ್ಯಾದಿಃ** **ಸರಕಾರ**

**–ವಿರುದ್ಧ –**

**ಆರೋಪಿ:** ಚಂದು ಎಸ್. ತಂ . ಎಲ್ . ಶ್ರೀನಿವಾಸ,
ಪ್ರಾಯಃ 22 ವರ್ಷ, ವೃತ್ತಿಃ ಖಾಸಗಿ ಕಂಪನಿಯಲ್ಲಿ ಮೆನೇಜರ್,
ಸಾಃ ಮುತ್ಯಾಲ್ ಪೇಟೆ, ಮುಳಬಾಗಿಲು ತಾಲೂಕ,
ತಾಃ ಕೋಲಾರ ಜಿಲ್ಲೆ

**<u>ಆಪಾದನೆ</u>**

ದಿನಾಂಕಃ 26–12–2023 ರಂದು ಬೆಳಿಗ್ಗೆ 6–00 ಗಂಟೆಗೆ ಅಂಕೋಲಾ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ಅವರ್ಸಾದ ಕಾತ್ಯಾಯನಿ ಹೈಸ್ಕೂಲ್ ಹತ್ತಿರ ಹಾಯ್ದಿರುವ ಚತುಷ್ಪಥ ರಾಷ್ಟ್ರೀಯ ಹೆದ್ದಾರಿ 66 ರಸ್ತೆಯಲ್ಲಿ ಆರೋಪಿಯಾದ ನೀನು ಮಹೀಂಧ್ರಾ xuv ಕಾರ ನಂ. ಎಚ್ ಆರ್–06/ಎಎ–4117 ನೇದನ್ನು ಕಾರವಾರ ಕಡೆಯಿಂದ ಅಂಕೋಲಾ ಕಡೆಗೆ ಅತೀ ವೇಗ ಮತ್ತು ಅಜಾಗರೂಕತೆಯಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಹೋಗಿ ನಿನ್ನ ಮುಂದಿನಿಂದ ಹೋಗುತ್ತಿದ್ದ ಯಾವುದೋ ಒಂದು ಲಾರಿ ವಾಹನಕ್ಕೆ ಎಡಬದಿಯಿಂದ ಓವರಟೇಕ್ ಮಾಡಲು ಹೋಗಿ ನಿನ್ನ ಕಾರಿನ ವೇಗವನ್ನು ನಿಯಂತ್ರಿಸಲಾಗದೇ ರಸ್ತೆಯ ಎಡಬದಿಯ ಪುಟಪಾತ್ ಮೇಲೆ ಕಾರನ್ನು ಚಲಾಯಿಸಿ ಚಾಸಾ–6– ಕು.ಅನಿತಾ ತಂ. ಅಶೋಕ ನಾಯ್ಕ ಇವರ ಸಂಗಡ ವಾಕಿಂಗಗೆ ಅವರ್ಸಾದಿಂದ ಹಟ್ಟಿಕೇರಿ ಕಡೆಗೆ ಪುಟಪಾತ್ ಮೇಲೆ ನಡೆದುಕೊಂಡು ಹೋಗುತ್ತಿದ್ದ ಫಿರ್ಯಾದಿಯ ಅತ್ತಿಗೆ ಶ್ರೀಮತಿ ದೀಪಾ ಗಂಡ ಅಶೋಕ ನಾಯ್ಕ ಇವರಿಗೆ ಹಿಂದಿನಿಂದ ಡಿಕ್ಕಿ ಹೊಡೆದು ಅಪಘಾತಪಡಿಸಿರುತ್ತೀಯಾ. ಆ ಮೂಲಕ

ಭಾ. ದಂ. ಸಂ. ಕಲಂ 279 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀಯಾ ಅಂತಾ ನಿನ್ನ ಮೇಲೆ ಆಪಾದನೆ ಇರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀನು ಶ್ರೀಮತಿ ದೀಪಾ ಅಶೋಕ ನಾಯ್ಕ ಇವರ ತಲೆಯ ಹಿಂಬದಿಗೆ ಹಾಗೂ ಮೈಮೇಲೆ ಅಲ್ಲಲ್ಲಿ ಭಾರೀ ಗಾಯನೋವ್ರುಪಡಿಸಿ ಅವರು ಸ್ಥಳದಲ್ಲಿಯೋ ಮರಣವನ್ನುಂಟಾಗುವಂತೆ ಮಾಡಿರುತ್ತೀಯಾ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀಯಾ ಅಂತಾ ನಿನ್ನ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆಃ 1 ನಿನಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾದ ಆಪಾದನೆ ಬಗ್ಗೆ ನಿನಗೆ ಅರ್ಥವಾಯಿತೇ?

ಉತ್ತರಃ

ಪ್ರಶ್ನೆಃ 2 ಮೇಲ್ಕಂಡ ಅಪರಾಧಗಳಿಗೆ ಸಂಬಂಧಪಟ್ಟಂತೆ ತಪ್ಪು ಒಪ್ಪಿಕೊಳ್ಳುತ್ತೀಯಾ ಅಥವಾ ವಿಚಾರಣೆ ಆಗಬೇಕು ಅಂತಾ ಬಯಸುತ್ತೀಯಾ?

ಉತ್ತರಃ

( ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ತಿಳಿಸಿ ಆತನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)

Sd/-

ದಿನಾಂಕಃ 20-09- 2024 **(ಅರ್ಪಿತಾ ಬಿ. ಬೆಲ್ಲದ್)**

ಅಂಕೋಲಾ **ಪ್ರಭಾರ ಪ್ರ.ದ. ನ್ಯಾದಂ, ಅಂಕೋಲಾ.**

ಆರೋಪಿಯ ಸಹಿ.